ಕರ್ನಾಟಕ ಸರ್ಕಾರ
ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ.
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, 7ನೇ ಮಹಡಿ, 4ನೇ ಗೇಟ್, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು-560 001
ದೂರವಾಣಿ: 080-2203 2013, ಇ-ಮೇಲ್: visiongroup.st@gmail.com, ವೆಬ್‌ಸೈಟ್: www.vgst.in

ಸಂಖ್ಯೆ: ವಿತಂದಾಸ/ಅನುಮೋದನೆ ಪತ್ರ/ಜಿ.ಆರ್.ಡಿ ಸಂಖ್ಯೆ: 935/2020-21/195 ದಿನಾಂಕ: 23.12.2021

ಇವರಿಗೆ,
ಪ್ರಾಂಶುಪಾಲರು,
ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್,
ಪೋಸ್ಟ್ ಬಾಕ್ಸ್ ಸಂಖ್ಯೆ: 1908, ಬುಲ್ ಟೆಂಪಲ್ ರಸ್ತೆ,
ಬೆಂಗಳೂರು - 560 019.

ಮಾನ್ಯರೆ,

ವಿಷಯ: **K-FIST(L2)** ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿ ವಿದ್ಯಾಸಂಸ್ಥೆಗಳಿಗೆ ಮೊದಲನೇ ಕಂತಿನ ಅನುದಾನದಿಂದ ಉಪಕರಣಗಳ/ವಸ್ತುಗಳ (ಪಾರ್ಟ್-ಎ) ಖರೀದಿಗೆ (ಜಿ.ಆರ್.ಡಿ-935) ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1. ಸೂಚನೆ ಪತ್ರ ಸಂಖ್ಯೆ: ಕೆಸ್ಟೆಪ್ಸ/ವಿತಂದಾಸ/K-FIST(L2)/GRD No.935/2020-21/66
ದಿನಾಂಕ: ಆಗಸ್ಟ್ 26, 2021
2.ತಮ್ಮ ಸಂಸ್ಥೆಯಿಂದ ದಾಖಲೆಗಳನ್ನು ಸಲ್ಲಿಸಿದ ದಿನಾಂಕ:01-10-2021.
3.ಮೊದಲನೇ ಕಂತಿನ ಅನುದಾನ ಬಿಡುಗಡೆಯ ಪತ್ರದ ಸಂಖ್ಯೆ: KSTePS/VGST/2020-21/K-FIST(L2)/**GRD-935**/29/2021-22/968, ದಿನಾಂಕ: 16-11-2021.

*****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಜ್ಞಾನ ಹಾಗೂ ತಂತ್ರಜ್ಞಾನ ದಾರ್ಶನಿಕ ಸಮೂಹ (ವಿತಂದಾಸ) ದ ವಿವಿಧ ಯೋಜನೆಗಳಲ್ಲೊಂದಾದ **K-FIST(L2)** ಕಾರ್ಯಕ್ರಮದಡಿ 2020-21ನೇ ಸಾಲಿನಲ್ಲಿ ಆಯ್ಕೆಯಾಗಿದ್ದ ಡಾ॥ ರವಿಕುಮಾರ್. ಎಲ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ,ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು (ಜಿ.ಆರ್.ಡಿ-935) ರವರು ಸಲ್ಲಿಸಿದ **"Establishment of infrastructure facilitating studies related to impact dynamics/material damping potential estimation from application oriented research/academic perspectives"** ಶೀರ್ಷಿಕೆಯ ಪ್ರಸ್ತಾವನೆಗೆ ಮೊದಲನೇ ಕಂತಿನ ಅನುದಾನವಾಗಿ **ರೂ.10.00** ಲಕ್ಷಗಳನ್ನು RTGSನ ಮೂಲಕ ಬಿಡುಗಡೆ ಮಾಡಲಾಗಿರುವುದು ಸರಿಯಷ್ಟೆ.

ಈ ನಿಟ್ಟಿನಲ್ಲಿ, ವಿತಂದಾಸದ ವಿಮರ್ಶಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ಯೋಜನಾ ಸಂಯೋಜಕರು ಮೊದಲನೇ ಕಂತಿನ ಅನುದಾನಕ್ಕೆ ಸಲ್ಲಿಸಿದ್ದ PART-A ದಾಖಲೆಗೆ ಅನುಗುಣವಾಗಿ ರೇಕರಿಂಗ್ ಮತ್ತು ನಾನ್-ರೇಕರಿಂಗ್ ವಸ್ತುಗಳ ಅಡಿಯಲ್ಲಿ ಉಪಕರಣಗಳು/ವಸ್ತುಗಳ ಖರೀದಿಗೆ ಅನುಮೋದನೆಯನ್ನು ಈ ಕೆಳಗಿನಂತೆ ನೀಡಲಾಗಿದೆ:

PART-A ಪ್ರಕಾರ ನಾನ್-ರೇಕರಿಂಗ್ ಮತ್ತು ರೇಕರಿಂಗ್ ವಿವರಗಳ ಪಟ್ಟಿ ಈ ಕೆಳಗಿನಂತಿವೆ

ಕ್ರಮ ಸಂಖ್ಯೆ	ವಿವರಗಳು ನಾನ್-ರೇಕರಿಂಗ್	ಒಟ್ಟು ಪ್ರಮಾಣ	ಎತಂದಾನದಿಂದ ಅನುಮೋದನೆ ನೀಡಿದ ಮೊತ್ತ (ರೂ. ಗಳಲ್ಲಿ)
	ಇ-ಟೆಂಡರ್		
1	Test rig fabrication	01	6,25,000.00
2	Eddy current probe	02	3,00,000.00
	A) ಇ-ಟೆಂಡರ್ ಮೊತ್ತ		9,25,000.00
	ಮಾನ್ಯುಯಲ್ ಟೆಂಡರ್		
3	Damping materials	05	15,000.00
4	Function generator	01	60,000.00
	B) ಮಾನ್ಯುಯಲ್ ಟೆಂಡರ್ ಮೊತ್ತ		75,000.00
	ಒಟ್ಟು ನಾನ್-ರೇಕರಿಂಗ್ ಮೊತ್ತ (A+B)		10,00,000.00
	ಒಟ್ಟು ರೇಕರಿಂಗ್ ಮೊತ್ತ		0.00
	ಒಟ್ಟು ನಾನ್-ರೇಕರಿಂಗ್ ಮತ್ತು ರೇಕರಿಂಗ್ ಮೊತ್ತ		10,00,000.00

ಯೋಜನೆಯ ಅನುಷ್ಠಾನಕ್ಕೆ ಅನುದಾನವನ್ನು ಬಳಸುವಾಗ ಈ ಕೆಳಕಂಡ ಅಂಶಗಳನ್ನು ಅನುಸರಿಸಲು ಕೋರಲಾಗಿದೆ:

1) ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ತಮ್ಮ ಸಂಸ್ಥೆಯಿಂದಾಗಲೀ ಅಥವಾ ಬೇರೆ ಸಂಸ್ಥೆಗಳ ಮುಖಾಂತರವಾಗಲೀ ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ - 1999 ಮತ್ತು ನಿಯಮಗಳು 2000 (KTPP Act - 1999 & Rules - 2000), ಕರ್ನಾಟಕ ಆರ್ಥಿಕ ಸಂಹಿತೆ (KFC)ಹಾಗೂ ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಮತ್ತು ಕಡ್ಡಾಯವಾಗಿ ಅನುಸರಿಸುವುದು/ ಪಾಲಿಸುವುದು.

2) ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನದಿಂದ ಅನುಮೋದಿತ ಪಾರ್ಟ್-ಎ (Part-A) ನಲ್ಲಿ ನಮೂದಿತವಾಗಿರುವ ಯಂತ್ರಗಳನ್ನು ಮಾತ್ರ ಖರೀದಿಸುವುದು ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

3) ರೂ.1.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣಗಳನ್ನು ಇ-ಟೆಂಡರ್ ಮೂಲಕ ಮಾತ್ರ ಖರೀದಿಸತಕ್ಕದ್ದು. ರೂ.1.00 ಲಕ್ಷಕ್ಕಿಂತ ಕಡಿಮೆ ಬೆಲೆಯ ಉಪಕರಣಗಳನ್ನು ಮಾನ್ಯುಯಲ್ ಟೆಂಡರ್ ಮೂಲಕ ಖರೀದಿಸ ಬಹುದು.

4) ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನವನ್ನು ಅಗತ್ಯಕ್ಕೆ ಅನುಗುಣವಾಗಿ ನೀಡಲಾದ ಉದ್ದೇಶಕ್ಕೆ ಮಾತ್ರ ಬಳಸುವುದು ಹಾಗೂ ಸದರಿ ಅನುದಾನಕ್ಕೆ ಬರುವ ಬ್ಯಾಂಕ್ ಬಡ್ಡಿ ಮೊತ್ತವನ್ನು ಯಾವುದೇ ಕಾರಣಕ್ಕೂ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಳಸಿಕೊಳ್ಳಲು ಅನುಮತಿ/ಅವಕಾಶವಿರುವುದಿಲ್ಲ. ಈ ಬಡ್ಡಿಯ ಮೊತ್ತವನ್ನು ಉಪಯೋಗಿತ ಪ್ರಮಾಣ - ಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ರವರ ಹೆಸರಿನಲ್ಲಿ ಚೆಕ್ /ಡಿ.ಡಿ. ಮೂಲಕ ಹಿಂತಿರುಗಿಸುವುದು.

ತಮ್ಮ ವಿದ್ಯಾಸಂಸ್ಥೆಗೆ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಬಿಡುಗಡೆ ಮಾಡುತ್ತಿರುವ ಮೊದಲನೇ ಕಂತಿನ ಅನುದಾನದಲ್ಲಿ ಬಳಕೆಯಾಗದೆ ಉಳಿಕೆಯಾಗುವ ಮೊತ್ತವನ್ನು ಮುಂದಿನ ಕಂತಿನ ಅನುದಾನಲ್ಲಿ ಕಡಿತಗೊಳಿಸಿ ಉಳಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

6) ಯೋಜನೆಯನ್ನು ಕಾರ್ಯಗತಗೊಳಿಸುವಾಗ ಸರ್ಕಾರದ ಎಲ್ಲಾ ಮಾರ್ಗಸೂಚಿಗಳು, ನಿಯಮಗಳು ಮತ್ತು ಪರತ್ತುಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಡಾ॥ ರೋಹಿತ್ ಕುಮಾರ್.ಹೆಚ್. ಜಿ

ವಿಜ್ಞಾನಿ-ಎಸ್.ಡಿ, ಕೆಸ್ಟೆಪ್ಸ್/ಸಂಯೋಜಕರು,ವಿತಂದಾಸ

ಪ್ರತಿ:

1) ಡಾ॥ ರವಿಕುಮಾರ್.ಎಲ್., ಪ್ರಾಧ್ಯಾಪಕರು, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಪೋಸ್ಟ್ ಬಾಕ್ಸ್ ಸಂಖ್ಯೆ 1908, ಬುಲ್ ಟೆಂಪಲ್ ರಸ್ತೆ, ಬೆಂಗಳೂರು - 560 019.

2) ಡಾ॥ ರಘು ಯೋಗರಾಜು (Co-PI), ಸಹಾಯಕ ಪ್ರಾಧ್ಯಾಪಕರು, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಬಿ.ಎಂ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಪೋಸ್ಟ್ ಬಾಕ್ಸ್ ಸಂಖ್ಯೆ 1908, ಬುಲ್ ಟೆಂಪಲ್ ರಸ್ತೆ, ಬೆಂಗಳೂರು - 560 019.